


International Journal of Kannada Research
www.kannadajournal.com

**ISSN: 2454–5813**
IJKR 2020; 6(2): 41-42
© 2020 IJKR
www.kannadajournal.com
Received: 24-02-2020
Accepted: 26-03-2020

**Vijayalakshmi D**
Assistant Professor,
Kannada Department,
Ramaiah College of Arts,
Science & Commerce
Mattikere, Karnataka.India

**Corresponding Author:**
**Vijayalakshmi D**
Assistant Professor,
Kannada Department,
Ramaiah College of Arts,
Science & Commerce
Mattikere, Karnataka.India

# ಜನಪದ ಸಾಹಿತ್ಯ–ಒಂದು ನೋಟ

**Vijayalakshmi D**

ಜನಪದ "ಜನರ ಪದ" ಭಾವನೆಗಳಿಗೆ ಅಕ್ಷರ ರೂಪ ಕೊಟ್ಟು ತಮ್ಮ ಸಮಾಜದ ಸಂಸ್ಕೃತಿಯ ಅಸ್ಮಿತೆಯಾಗಿರುವಂತಹದ್ದು. ಪುರಾತನ ಮಾನವ ತನ್ನ ಭಾವೋದ್ಗಾರಗಳಿಗೆ ಪ್ರಪ್ರಥಮ ಗವಾಕ್ಷವನ್ನು ತೆರದದ್ದು ಜನಪದ ಸಾಹಿತ್ಯದ ಮೂಲಕವೇ. ಮನುಷ್ಯ ಭೂಮಿಯ ಮೇಲೆ ಪಾದಾರ್ಪಣೆ ಮಾಡಿದಂದಿನಿಂದಲೇ ಇದರ ಉದಯವಾಗಿದ್ದರೂ ಕ್ರಮೇಣ ತನ್ನ ಸ್ಪಷ್ಟ ರೂಪವನ್ನು ಪಡೆದಿರಬೇಕೆಂದು ತೋರುತ್ತದೆ. ವ್ಯಕ್ತಿರೂಪದ ಸಾಹಿತ್ಯಕ್ಕೆ ಈ ಸಮಷ್ಟಿ ರೂಪದ ಸಾಹಿತ್ಯವೇ ಮೂಲ ಹಾಗು ಪ್ರೇರಕ. ಮಾನವ, ಅವನ ಸಮಾಜ ಮತ್ತು ಸಂಸ್ಕೃತಿಗಳ ನಾಗರೀಕತೆಗಳ ಬಗ್ಗೆ ಅಧಿಕ ಪುರಾವೆಗಳನ್ನು ಒದಗಿಸಬಲ್ಲ ಸಾಹಿತ್ಯ ಜನಪದ ಸಾಹಿತ್ಯ.

ಅನಕ್ಷರಸ್ಥ ಜನಸಮೂಹದ ನಡುವೆ ವಾಕ್ಸಂಪ್ರದಾಯ ಮೂಲಕ ಹರಿದು ಬಂದಿರುವ ಒಂದು ಗುಂಪಿನ ಕಾವ್ಯ, ಜನಪದ ಸಾಹಿತ್ಯ. ನಾಗರೀಕ ಮನಸ್ಸಿನ ಅಭಿವ್ಯಕ್ತಿಯಲ್ಲಿ ಗ್ರಾಮೀಣ ಬದುಕಿನ ಸುಖ ದುಃಖಗಳನ್ನು, ಸಮಸ್ಯೆ, ಕ್ಲೇಶಗಳನ್ನು ಹೇಳುವಂಥದ್ದು. ಇಲ್ಲಿನ ಮನೋಭಾವ ತೀವ್ರ ಮಾನವೀಯ, ರಾಗ ಮತ್ತು ಪದರಚನೆಯ ಬಂಧವೇ ಇದರ ಲಕ್ಷಣ, ಸರಳತೆ ಮತ್ತು ಸ್ಪಷ್ಟತೆ ಇದರ ಮತ್ತೆರಡು ಲಕ್ಷಣಗಳು. ಜನಪದ ಸಾಹಿತ್ಯದಲ್ಲಿ ಅಭಿಜಾತ ಕಲೆಯ ತಾಂತ್ರಿಕ ಸೂಕ್ಷ್ಮ ಇರದಿದ್ದರೂ ಹೆಚ್ಚಿನ ಸ್ಥಾನಮಾನ ಗಳಿಸಿಕೊಂಡಿದೆ.

ಜಾನಪದ ಅಧ್ಯಯನ ತನ್ನ ಎಲ್ಲೆಯನ್ನು ಬಹುವಾಗಿ ವಿಸ್ತರಿಸಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಜಾನಪದ ಕುರಿತಾದ ತಾತ್ವಿಕ ಚರ್ಚೆಗಳು ಹೆಚ್ಚು ಹೆಚ್ಚು ನಡೆಯುವುದು ಆವಶ್ಯಕ. ಈ ಚರ್ಚೆಗಳು ಜಾನಪದ ಅಧ್ಯಯನದ ಶಾಸ್ತ್ರೀಯ ನಿಲುವುಗಳನ್ನು ಜೀವಂತವಾಗಿಡುವುದಲ್ಲದೆ, ಜಾನಪದ ಆಸಕ್ತರ ಮತ್ತು ಈ ಕ್ಷೇತ್ರಕ್ಕೆ ಹೊಸದಾಗಿ ಪ್ರವೇಶಿಸುತ್ತಿರುವವರ ಜಾನಪದ ಪರಿಕಲ್ಪನಾತ್ಮಕ ದೃಷ್ಟಿಯನ್ನು ಬೆಳೆಸುವಲ್ಲಿ ಪಾತ್ರವಹಿಸುತ್ತದೆ.

**ಸಾರಾಂಶ:**

ಜನಪದ ಸಾಹಿತ್ಯ ಶ್ರೀಮಂತವಾಗಿರುವುದು ಜನಪದ ಗೀತೆ, ಲಾವಣಿ, ಜನಪದ ಕಥೆ, ಗಾದೆ, ಒಗಟು ಹಾಗೂ ಜನಪದ ಕಲೆಗಳಿಂದ. ಜನಪದ ಕಾವ್ಯ ಸಂದರ್ಭದ ಕೂಸು, ಜನಪದ ಕಾವ್ಯಕ್ಕೆ ಸಾಹಿತ್ಯಕ್ಕೆ ಒಬ್ಬ ವ್ಯಕ್ತಯ ವ್ಯಕ್ತಿತ್ವವೆಂಬ ಸಂದರ್ಭ ಕಾರಣವಾಗದೆ ಇಲ್ಲಿ ಸಮೂಹ ಸಂದರ್ಭಗಳು ಮುಖ್ಯವಾಗುತ್ತದೆ. ಜನಪದ ಕಾವ್ಯ ಸಮೂಹ ಸೃಷ್ಡಿಯಾಗಿರುತ್ತದೆ. ಅಂದರೆ ಇಲ್ಲಿ ಒಮ್ಮೆಗೆ ಹಲವಾರು ಜನ ಕೂಡಿ ಒಂದು ಕಾವ್ಯ, ಕಥೆ ಸೃಜಿಸುತ್ತಾರೆಂದು ಅರ್ಥವಲ್ಲ, ಸಮೂಹವೊಂದು ಅದನ್ನು ಕೈಗೆತ್ತಿಕೊಂಡಾಗ ಸಮೂಹದ್ದಾಯಿತು. ಪರಂಪರಾಗತಾವಾಗಿ ಸಂವಹನಗೊಂಡಾಗ ಸಾಂಪ್ರದಾಯಿಕವಾಯಿತು.

ಜನಪದ ಕಾವ್ಯವು ಯಾವುದೇ ಒಂದು ವಿಶಿಷ್ಟ ಸಂದರ್ಭದಲ್ಲಿ ಸಹಜವಾಗಿ ಮೈತಳೆದಿರುವುದನ್ನು ಗುರುತಿಸಬಹುದಾಗಿದೆ. ಹಾಗಾಗಿ ಸಹಜವಾಗಿ ಅಯಾ ಸಂದರ್ಭಕ್ಕೆ ಸಂಬಂಧಿಸಿದ ವಿಷಯ ಆ ಕಾವ್ಯದ ವಸ್ತುವಾಗಿ ಬಿಡುತ್ತದೆ.

ಜನಪದರರದು ಮುಖ್ಯವಾಗಿ ದುಡಿಮೆಯ ಬದುಕು. ಮುಂಜಾನೆ ಎದ್ದರೆ ಸಾಕು ಕೆಲಸಗಳು ಪ್ರಾರಂಭವಾಗುತ್ತವೆ. ಸುದೀರ್ಘವಾದ ವೇಳೆ ತೆಗೆದುಕೊಳ್ಳುವ ದುಡಿಮೆಯ ಸಂದರ್ಭಗಳಲ್ಲಿ ಮಾನವನ ಕಂಠ ಧ್ವನಿಗಿಂತ ಕಡಿಮೆ ಧ್ವನಿಹೊರಡುವ ಹಾಗೂ ಆ ಧ್ವನಿ ಲಯಬದ್ಧವಾಗಿರುವ ಕೆಲಸದ ಸಂದರ್ಭಗಳಲ್ಲಿ ಹಾಡುಗಳು ಹುಟ್ಟುಕೊಳ್ಳುತ್ತವೆ. ಬೀಸುವ , ಕುಟ್ಟುವ,ತೊಟ್ಟಿಲುತೂಗುವ,ಗೂಡು ಮುರಿಯುವ, ಕಳೆಕೀಳುವ, ಹಂತಿ, ಮಟ್ಟಿ, ನೇಗಿಲು, ಕುಂಟಿ ಚಕಡಿ–ಹೋಡೆಯುವ ಸಂದರ್ಭಗಳಲ್ಲಿ ಹಾಡುಗಳು ಕಾಣಿಸಿಕೊಳ್ಳುತ್ತವೆ.

ಜನಪದರ ಬದುಕಿನ ಒಂದು ಸಣ್ಣ ಬದಲಾವಣೆಯು ಸಾಮಾನ್ಯ ಸಂಗತಿಯಲ್ಲೂ ಜನಪದರ ಕಾವ್ಯದ ಹುಟ್ಟು ಕಾಣಿಸಿಕೊಳ್ಳುತ್ತದೆ. ಜನನ–ಸಾವು, ಮದುವೆ–ಮುಂಜಿ ಒಂದು ವೃತ್ತಿಯ ಆರಂಭ, ಮುಕ್ತಾಯ ಬೀಜದ–ಬಿತ್ತಣಿಕೆ–ಬೆಳೆಯರಾಶಿ, ಹೀಗೆ ತನ್ನ ಬದುಕಿನಲ್ಲಿ ಸಣ್ಣ ಬದಲಾವಣೆಯಾಗಿ ಕಾಣುವ ಹುಣ್ಣಿಮೆ, ಅಮವಾಸೆ, ಹಬ್ಬ–ಹರಿದಿನ ಇಂತಹ ಏನೇ ಆದರೂ ಮನುಷ್ಯ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ಹಾಡುತ್ತಾ–ಕುಣಿಯುತ್ತಾನೆ, ನಗುತ್ತಾ– ಅಳುತ್ತಾನೆ, ಇಂಥಲೆಲ್ಲಾ ಹಾಡು ಕಥೆಗಳು ಹುಟ್ಟುಕೊಳ್ಳುವುದು ಸಾಮಾನ್ಯ.

ಜನಪದ ಸಾಹಿತ್ಯ ಮುಖ್ಯವಾಗಿ "ಗ್ರಾಮವಾಸಿಗಳ ಕೊಡುಗೆ". ಗ್ರಾಮೀಣ ಸಂಸ್ಕೃತಿಯನ್ನು ಜನಪದ ಸಾಹಿತ್ಯ ಪ್ರತಿನಿದಿಸುತ್ತದೆ. ಇಂತಹ ಸಾಹಿತ್ಯ ಸಾಮಾನ್ಯರ ಬದುಕನ್ನು ಪ್ರತಿನಿದಿಸುತ್ತದೆ, ಸ್ಪಂದಿಸುತ್ತದೆ. ಜನಪದ ಸಾಹಿತ್ಯದಲ್ಲಿ ಸಮಷ್ಟಿ ಪ್ರಜ್ಞೆ ಬಹುಮಹತ್ವದ ಸಂಗತಿ. ಜನಪದ ಸಾಹಿತ್ಯ ಒಂದು ಸಣ್ಣ ಗಾದೆ, ತ್ರಿಪದಿ ಒಂದು ಕಥೆ–ಹುಟ್ಟುಕೊಳ್ಳುವುದು ಒಬ್ಬನಿಂದಲೇ ಆದರೆ ಮುಖ್ಯವಾಗಿ ಆತ ಗ್ರಾಮಾಂತರ ಪ್ರದೇಶದ ಸಹಕಾರ ಬಾಳ್ವೆಯಿಂದ ಬದುಕುತ್ತಿರುವುದರಿಂದ ಅವನ ನೋವು ನಲಿವುಗಳು ವಯಕ್ತಿಕ ಮಟ್ಟದಲ್ಲಿ ಅಭಿವ್ಯಕ್ತಗೊಳ್ಳದೆ ಅವು ಜನ ಸಾಮಾನ್ಯರ ನೋವು ನಲಿವಿನ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಜನಪದ ಸಾಹಿತ್ಯ ಜಾನಪದದ ಒಂದು ಭಾಗ ಮಾತ್ರ. ಅಧ್ಯಯನದ ಸೌಲಭ್ಯಕ್ಕಾಗಿ ಜಾನಪದವನ್ನು ಸ್ಥೂಲವಾಗಿ ಜನಪದ ಕಾವ್ಯ, ಜನಪದ ಗದ್ಯಕಥನ, ಭ್ಹಾಷಿಕ ಬಗೆಗಳು ಪ್ರದರ್ಶನ ಕಲೆಗಳಾಗಿ ವಿಭಜಿಸಬಹುದು.

ಜನಪದ ಕಾವ್ಯಗಳಲ್ಲಿ ಹಾಡು, ಕಥನಗೀತೆ, ಲಾವಣಿಗಳನ್ನು ನೋಡಬಹುದು.

ಜನಪದ ಗೀತೆಗೆ ಒಂದು ನಿಗದಿತ ಸ್ವರೂಪ ಇರುವುದಿಲ್ಲ. ಅದು ಹಲವರ ನಾಲಿಗೆಯ ಮೇಲೆ ತೇಲುವುದರಿಂದ ಭಿನ್ನ ಪಾಠಗಳನ್ನು ರೂಪಾಂತರಗಳನ್ನು ಹೊಂದುವುದು ಸ್ವಾಭಾವಿಕವೇ. ಇದರ ಮುಖ್ಯ ಗುಣ 'ಹಾಡುವೊಂಥದು' ಸಂತೋಷ, ಭಯ, ದುಃಖ ಈ ಯಾವುದಾದರೂ ಭಾವಗಳಿಗೆ ರೂಪು ಕೊಡಲು ಭಾವಾವೇಷಗಳನ್ನು ಪ್ರಕಟ ಮಾಡಲು ಹಾಡುಗಾರ ಅನಿವಾರ್ಯವಾಗಿ ಲಯಾತ್ಮಕ ಗುಣಗಳನ್ನು ಧಾರಣಗೊಳಿಸಿಕೊಳ್ಳುತ್ತಾನೆ. ಆ ಗೇಯ ಗುಣದಿಂದ ಅದು ಒಂದು ಬಗೆಯ ಸಂಗೀತ ಕಲೆಯಾಗಿ ಹೊರಹೊಮ್ಮುತ್ತದೆ.

ಲಾವಣಿ ಕಥನಗೀತೆಯ ಮೂಲದ್ರವ್ಯವೇ ಕಥಾಂಶ. ಹಾಡೊಂದು ಮೊದಲಿನಿಂದ ಕೊನೆಯವರೆಗೂ ಕಥೆಯನ್ನು ಹೇಳುವುದು. ಹಾಡೊಂದು ಕಥೆಯನ್ನು ಹೇಳಿದರೆ ಸಾಲದು ಅದು ಹಾಡುವಂಥದ್ದಾಗಿರಬೇಕು. ಮೌಖಿಕ ಪರಂಪರೆಯಲ್ಲಿ ಪರಂಪರಾಗತವಾಗಿ ಸಾಗಿ ಬಂದ ಹಾಡಿನಲ್ಲಿ ನಿರೂಪಿಸಲಾದ ಕಥೆಯನ್ನು ಲಾವಣಿ ಎನ್ನಬಹುದು. ಲಾವಣಿಗಳು ಸಾಮಾನ್ಯವಾಗಿ ಪ್ರಮುಖ ಘಟನೆಯನ್ನು ಆದರಿಸಿರುತ್ತದೆ. ಏಕ ಘಟನೆಯಾಧಾರಿತವಾದವು. ವಾಸ್ತವವಾಗಿ ಒಂದೇ ಘಟನೆಯ ಮೇಲೆ ನಡೆಯುವ ಹಾಡ್ಗತೆಗಳಿಗಷ್ಟೇ ಈ ಮಾತು ಅನ್ವಯವಾಗುತ್ತದೆ. ಸಾಮಾನ್ಯವಾಗಿ ಅವು ವಿರಾಮ ವೇಳೆಯ ಸಾಧನಗಳಲ್ಲಿ ಇವಕ್ಕೆ ನಿರ್ಧಿಷ್ಟ ಉದ್ದೇಶಗಳಿರುತ್ತವೆ. ಒಂದು ಸಂಸ್ಕೃತಿಯ ಸಾಂಪ್ರದಾಯಿಕ ಜ್ಞಾನದ ವಾಹಕಗಳಾಗಿರುವ ಅವು ಮನುಷ್ಯ ಜೀವನದ ಮೇಲೆ ಪ್ರಭಾವ ಬೀರುತ್ತದೆ.

ಅಜ್ಜಿ ಕಥೆ ಎಂದೇ ಗುರುತಿಸುವ ವಾಕ್ಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಬರುವ ಕಥೆಯನ್ನು ವಿದ್ವಾಂಸರು "ಜನಪದ ಕಥೆ" ಎಂದು ಕರೆಯುತ್ತಾರೆ. ಜನಪದ ಕಥೆ ಒಂದು ಕಲಾತ್ಮಕ ಸೃಷ್ಟಿಯೂ ಹೌದು. ಇದು ಜನತೆಯ ಸಾಂಸ್ಕೃತಿಕ, ಇತಿಹಾಸದ ಬಹು ಮುಖ್ಯ ಭಾಗವಾಗಿ ಕಾಣಿಸಿಕೋಳ್ಳುತ್ತದೆ. ಮನುಷ್ಯನ ಬೌದ್ಧಿಕ ವಿಷಿಷ್ಟತೆ. ಗ್ರಾಮ್ಯತೆ ಅದರ ಸೊಗಸು, ನಾಟಕೀಯತೆ ಇದರ ಉಸಿರು. ಜನಪದ ಕಥೆಗಳನ್ನು ಒಟ್ಟಾರೆ ಅಧ್ಯಯನ ಸೌಲಭ್ಯಕ್ಕಾಗಿ ಸಂಕೀರ್ಣ ಕಥೆಗಳು ಮತ್ತು ಸರಳ ಕಥೆಗಳು ಎಂಬುದಾಗಿ ವಿಂಗಡಿಸಿದ್ದಾರೆ.

ಗಾದೆಯಿಲ್ಲದ ಭಾಷೆಯೇ ಇಲ್ಲ, ದೇಶವೂ ಇಲ್ಲ ಎಂದು ಸಾಮಾನ್ಯವಾಗಿ ಹೇಳುವ ಮಾತು. ಅದರ ಸರ್ವವ್ಯಾಪಕ ಗುಣವನ್ನು ತಿಳಿಸುತ್ತದೆ. ಅನುಭವ ಸಾಂದ್ರತೆಗೆ ವಸ್ತು ವೈವಿದ್ಯತೆಗೆ, ಸಂಸ್ಕೃತಿ ಸಂಪನ್ನತೆಗೆ ವಿಚಾರ ವೈಭವಕ್ಕೆ ಹೆಸರಾದುದು ಕೂಡ ಅಂತೆಯೇ ಅದು ಜನಪದ ಬದುಕು ಭಾಷೆಗಳಲ್ಲಿ ಹಾಸು ಹೊಕ್ಕಾಗಿದೆ.

ಜನಪದ ಸಾಹಿತ್ಯದಲ್ಲಿ ಹಾಡು, ಹಾಡ್ಗತೆ, ಕಥೆ, ಗಾದೆಗಳಂತೆ ಒಗಟು ಕೂಡ ಒಂದು ಸ್ವತಂತ್ರ ಅಸ್ಥಿತ್ವವುಳ್ಳ ಪ್ರಕಾರ. ದೇಸೀ ಪರಂಪರೆಯಲ್ಲಿ ಅದರ ಸ್ಥಾನ ಗಟ್ಟಿಯಾದುದು. ಅದರ ಜನಪ್ರೀಯತೆಯಿಂದಾಗಿಯೇ ಅದು ಹಲವು ಸಂವಾದ ಪದಗಳನ್ನು ಒಳಗೊಂಡಿದೆ.

ವಾಸ್ತವವಾಗಿ ಒಗಟು ಶಬ್ದ 'ಬಗೆ' ಎಂಬ ಕನ್ನಡ ದಾತುವಿನಂದ ನಿಷನ್ನವಾದುದು. ಇದಕ್ಕೆ ಹೊಸ ಹುಟ್ಟುಪಡೆ, ಜನ್ಮತಾಳು ಎಂಬ ಅರ್ಥಗಳೂ ಇವೆ. ಒಗಟನ್ನು ಬಿಡಿಸು ಎಂಬ ಅರ್ಥದಲ್ಲಿ ಒಗಟು ಬಿಡಿ, ವಗಟ ವಡಚು ಎಂಬ ನುಡಿಗಳನ್ನು ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಜನರು ಬಳಸುವುದರ ಹಿನ್ನಲೆಯಲ್ಲಿ ಒಗಟು ಶಬ್ದದ ಅರ್ಥ ಹೇಳದೆ ಸೂಚಿಸಲಾಗಿರುವ ಸಂಗತಿಗಳನ್ನು ಕಂಡುಕೊಳ್ಳುವುದು ಎಂದರ್ಥವಾಗುತ್ತದೆ. ಒಡಚುವ ಕ್ರಿಯೆಯನ್ನು ಸೂಚಿಸುತ್ತದೆ.

ಜನಪದ ಪ್ರದರ್ಶನ ಕಲೆಗಳೆಲ್ಲವೂ ವ್ಯಾಪಕವಾಗಿ ಜನಪದ ರಂಗಭೂಮಿಯ ವ್ಯಾಪ್ತಿಯಲ್ಲಿಯೇ ಬರುತ್ತವೆ. ಇಲ್ಲಿ ಎಷ್ಟೋ ಕಲೆಗಳು ಕಸುಬಾಗಿ ಬಳಕೆಯಾಗುತ್ತವೆ. ಬಯಲಾಟ, ಯಕ್ಷಗಾನ, ಮೂಡಳಪಾಯ, ತಾಳ ಮದ್ದಲೆ, ಸಣ್ಣಾಟ, ತೊಗಲುಗೊಂಬೆ ಆಟ, ಸೂತ್ರದ ಬೊಂಬೆ ಆಟ ಇತ್ಯಾದಿ. ಗ್ರಾಮೀಣರು ತಮ್ಮ ಸಮಸ್ತ ಬದುಕಿಗೂ ಕಾರಣ ಕರ್ತರಾದ ದೈವೀ ಶಕ್ತಿಯನ್ನು ಮೊದಲಿನಿಂದಲೂ ಆರಾಧಿಸಿಕೊಡು ಬಂದಿದ್ದಾರೆ. ಆ ಶಕ್ತಿಯನ್ನು ಪೂಜಿಸುವಾಗ ಹೃದಯ ತುಂಬಿ ಹಾಡುತ್ತಾರೆ, ಮೈಮರೆತು ಕುಣಿಯುತ್ತಾರೆ. ಸುಗ್ಗಿ ಕುಣಿತ, ಹೆಜ್ಜೆಮೇಳ, ಸೋಮನ ಕುಣಿತ, ವೀರಮಕ್ಕಳ ಕುಣಿತ, ಕೋಲಾಟ, ಈ ಬಹುತೇಕ ಗ್ರಾಮ ಕಲೆಗಳಲ್ಲಿ ದೈವಿ ಅರಾಧನೆಯ ಹಿನ್ನಲೆಯಲ್ಲೇ ಬಂದವುಗಳು. ಇದರಲ್ಲಿ ವಾದ್ಯಪ್ರದಾನ ಕಲೆಗಳು ಕೆಲವುಗಳಿದ್ದರೆ ಗೀತ ಪ್ರದಾನ ಕಲೆಗಳು ಕೆಲವುಗಳಿವೆ.

ಅನಕ್ಷರಸ್ಥ ಸಮುದಾಯದಿಂದ ಹೊರಟ ಅಭಿವ್ಯಕ್ತಿ ತನ್ನ ಕಾರ್ಯಕ್ಷೇತ್ರವನ್ನು ವಿರಾಳವಾಗಿಸಿಕೊಂಡಿದೆ. ಬದುಕಿನ ಶ್ರಮವನ್ನು ಮರೆಯುವ ಸಲುವಾಗಿ ಹುಟ್ಟಿಕೊಂಡಂತ ಸಾಹಿತ್ಯವು ಇಂದು ಅಧ್ಯಯನದ ಕಾರ್ಯಕ್ಷೇತ್ರವೆನಿಸಿಕೊಂಡಿದೆ.

ಅಜ್ಞಾತ ವ್ಯಕ್ತಿಯೊಬ್ಬನಿಂದ ಹುಟ್ಟಿಕೊಂಡ ಸಾಹಿತ್ಯ ಸಮೂಹ ಸಾಹಿತ್ಯವಗುತ್ತದೆ.ಸಮಾಜದ ಜನಪದರ ಸಾಹಿತ್ಯವಾಗುತ್ತದೆ.ವ್ಯಕ್ತಿ ಮತ್ತು ಸಮುಷ್ಟಿಯ ಅವಿರತ ಸಾಧನೆ ಎದ್ದುಕಾಣುತ್ತದೆ.

ಜನಪದ ಸಾಹಿತ್ಯವು ಬಗೆದಷ್ಟು ಭಂಡಾರ , ಅದರ ವಿಶಾಲತೆ ಅಳತೆಗೆ ಬರುವಂತದರಲ್ಲಿ ಹಾಗಿದ್ದರು ಸಾಹಿತ್ಯದ ಒಂದು ಸೂಕ್ಷ್ಮ ಅವಲೋಕನ ಮಡಲಾಗಿದೆ.

## ಗ್ರಂಥಋಣ


1. ಜನಪದ ಅಧ್ಯಯನ – ದೇ. ಜವರೇಗೌಡ
2. ಜನಪದ ಸ್ವರೂಪ – ಹಾ.ಮಾ.ನಾಯಕ
3. ಜನಪದ ಕಾವ್ಯಮಿಮಾಂಸೆ ಹಾಗು – ಡಾ. ವೀರಣ್ಣದಂಡೆ ವಿಮರ್ಶಾ ಪ್ರಸ್ಥಾನಗಳು
4. ಜನಪದ ಗೀತೆ – ಸಿ.ಪಿ.ಕ